ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವನನ್ನು suspend ಮಾಡಿ, ಅವನು ಒಬ್ಬರ ಹಕ್ಕು ಪತ್ರವನ್ನು ಮೂರು ಜನರಿಗೆ ಹಂಚಿಕೆ ಮಾಡಿದ್ದಾನೆ, ಅಂಥ 500 ಜನರು ನನ್ನ ಮನೆಗೆ ಬರುತ್ತಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮಿಂದ ಏನೇನು ಮಾಡುವುದಕ್ಕೆ ಆಗುತ್ತದೋ ಆ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು: Ok

(ಗೊಂದಲ)

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ, ನನಗೆ calling attention ಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಕೊಡಿಸುತ್ತೇನೆ. ಇನ್ನು ಮಾನ್ಯ ಕೆ.ಎಂ. ಶಿವಲಿಂಗೇಗೌಡರೆ ಕೇಳಿ.

ವಿಷಯ: ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಸ್ಥಳೀಯವಾಗಿ ಮರಳನ್ನು ಸರಬರಾಜು ಮಾಡುತ್ತಿರುವವರಿಗೆ ಪೊಲೀಸರು ಅಡ್ಡಿಪಡಿಸುತ್ತಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಸ್ಥಳೀಯವಾಗಿ ಮರಳನ್ನು ಸರಬರಾಜು ಮಾಡುತ್ತಿರುವವರಿಗೆ ಪೊಲೀಸರು ಅಡ್ಡಿಪಡಿಸುತ್ತಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

ಅಧ್ಯಕ್ಷರು: ತಮಗೆ ಉತ್ತರ ಬಂದಿದೆಯೇ?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ,

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಯಾವುದೇ ನದಿಗಳಿಲ್ಲದ ಕಾರಣ ಮರಳು ಬ್ಲಾಕುಗಳನ್ನು ಗುರುತಿಸಲಾಗಿರುವುದಿಲ್ಲ. ಆದಾಗ್ಯೂ ಈ ತಾಲ್ಲೂಕಿಗೆ ಸಕಲೇಶಪುರ, ಆಲೂರು, ಬೇಲೂರು ಮತ್ತು ಅರಕಲಗೂಡಿನ ಮರಳು ಬ್ಲಾಕ್‌ಗಳಿಂದ ಮರಳು ಸಾಗಾಟ ಪರವಾನಗಿ ಪಡೆದು ಅರಸೀಕೆರೆ ತಾಲ್ಲೂಕಿಗೆ ಮರಳು ಪೂರೈಸಲಾಗುತ್ತಿದೆ.

ಮೊದಲು ಆದ್ಯತೆಯಲ್ಲಿ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ವಿತರಿಸುವಂತೆ ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗಿದೆ ಮತ್ತು ಸದರಿ ತಾಲ್ಲೂಕಿನಲ್ಲಿ ರೈತರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಮರಳನ್ನು ಪೂರೈಸಲು ಕ್ರಮವಹಿಸಲಾಗುವುದು.

ಹಾಸನ ಜಿಲ್ಲೆಯಲ್ಲಿ ಒಟ್ಟು 43 ಮರಳು ಬ್ಲಾಕುಗಳನ್ನು ಗುರುತಿಸಿ ಪರಿಸರ ಅನುಮತಿ ಪಡೆಯಲಾಗಿದೆ. ಈ ರೀತಿ ಪರಿಸರ ಅನುಮತಿ ಪತ್ರ ಪಡೆದ ಬ್ಲಾಕುಗಳಿಗೆ ಮೀಸಲಾತಿ ನಿಗದಿಪಡಿಸಿ ದಿನಾಂಕ:14.01.2015 ರಂದು ಜರುಗಿದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡು ಎಲ್ಲಾ ಬ್ಲಾಕುಗಳಿಗೆ ಟೆಂಡರ್ ಪ್ರಕ್ರಿಯೆ ನಡೆಸುವಂತೆ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಪ್ರಸ್ತುತ ಮಳೆಗಾಲ ಇರುವುದರಿಂದ ಹಾಗೂ ಮರಳು ನಿಕ್ಷೇಪವು ನೀರಿನಿಂದ ಆವೃತ್ತವಾಗಿರುವುದರಿಂದ ಮರಳು ಗಣಿಗಾರಿಕೆ ನಡೆಯುತ್ತಿರುವುದಿಲ್ಲ.

ಸದರಿ ತಾಲ್ಲೂಕಿನಲ್ಲಿ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ ವಾಹನಗಳಿಗೆ ಪೋಲಿಸ್ ಇಲಾಖೆ ವತಿಯಿಂದ 2014–15ನೇ ಸಾಲಿನಲ್ಲಿ 13 ಟ್ರ್ಯಾಕ್ಟರ್‌ಗಳಿಗೆ ಮತ್ತು 01 ಜೆಸಿಬಿಗೆ ಒಟ್ಟು ರೂ. 38,000/– ಗಳ ದಂಡ ವಿಧಿಸಿ 01 ಟ್ರ್ಯಾಕ್ಟರ್ ಮೇಲೆ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ ಹಾಗೂ 2015–16ನೇ ಸಾಲಿನಲ್ಲಿ 2 ಲಾರಿಗಳ ಮೇಲೆ ಮತ್ತು 01 ಟ್ರ್ಯಾಕ್ಟರ್ ಮೇಲೆ ಮೊಕದ್ದಮೆಯನ್ನು

ದಾಖಲಿಸಿದ್ದು, ಈ ಕಛೇರಿಯಿಂದ ಅಧಿಕ ಬಾರದ ಮರಳನ್ನು ಸಾಗಿಸುತ್ತಿದ್ದ 2 ಲಾರಿಗಳಿಗೆ ರೂ. 50,000/– ಗಳ ದಂಡವನ್ನು ವಿಧಿಸಲಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ನನ್ನ ಸಮಸ್ಯೆ ಏನೆಂದರೆ, ನಮ್ಮಲ್ಲಿ ಯಾವ ನದಿಗಳು ಇಲ್ಲ. ನಮಗೆ ಮರಳು ಬ್ಲಾಕ್ ಮಾಡುವುದಾಗಲಿ, ಹರಾಜು ಮಾಡುವಂಥದ್ದು ಯಾವುದೂ ಇಲ್ಲ. ನಮ್ಮಲ್ಲಿ ಹಳೆಯ ಕೆರೆಗಳಲ್ಲಿ, ಹಳ್ಳ–ಕೊಳ್ಳಗಳಲ್ಲಿ ಸಿಗುವಂಥ ಲೋಕಲ್ ಮರಳನ್ನು ಜನತಾ ಮನೆಗಳಿಗೆ ಮತ್ತು ಶೌಚಾಲಯಗಳನ್ನು ಕಟ್ಟುವಂಥದ್ದಕ್ಕೆ ತೆಗೆದುಕೊಂಡು ಬರುತ್ತಾರೆ. ಅದನ್ನು ತೆಗೆದುಕೊಂಡು ಬಂದಾಗ ಬ್ಲಾಕ್ ಮರಳನ್ನು ಕದ್ದು ತೆಗೆದುಕೊಂಡು ಬರುವವರಿಗೆ ಮಾಡುವ treatment ಅನ್ನೆ, ಲಾರಿಗಳಿಗೆ ಹಾಕುವಂಥ treatment ಅನ್ನೆ, ತಾವು ಅನೇಕ ಸಾರಿ ನಮ್ಮ ಜಿಲ್ಲೆಗೆ ಬಂದಾಗಲೂ ಹೇಳಿದ್ದೀರಿ. ಲೋಕಲ್ ಮರಳಿಗೆ ನಮ್ಮ ನಿಬಂಧನೆ ಇಲ್ಲ, ಲೋಕಲ್ ಮರಳನ್ನು ಹಿಡಿಯಬೇಡಿ, ಅದನ್ನು ಬಿಡಿ ಎಂದು ಹೇಳಿದ್ದೀರಿ. ಆದರೆ ನಮ್ಮಲ್ಲಿ ಲೋಕಲ್ ಮರಳು ಅದು ಕೆಂಪು ಮರಳು ಆಗಿದ್ದು, ಅದು ಮಣ್ಣು ಮಿಶ್ರಿತವಾಗಿರುವಂಥದ್ದು, ಅದನ್ನು ಜರಡಿ ಮಾಡಿಕೊಂಡು ನಮ್ಮಲ್ಲಿ ಏನೋ ಮಾಡುತ್ತಾರೆ. ನಮ್ಮಲ್ಲಿ ಹೊಳೆ ಮರಳು ಸಿಗುವುದಿಲ್ಲ, ನಮ್ಮಲ್ಲಿ ನದಿಯೇ ಇಲ್ಲ. ಆದ್ದರಿಂದ ಲೋಕಲ್ ಮರಳಿಗೆ 3,000, 5,000, 10,000 ರೂ.ಗಳ ವೆನಾಲ್ಟಿ ಹಾಕಿ, ಅದನ್ನು ಸಿಗದ ಹಾಗೆ ಮಾಡಿ, ಸಾರ್ವಜನಿಕರಿಂದ ಬಹಳ ನಿಂದನೆ ನಡೆಯುತ್ತಿದೆ. ಲಾಬಿ ನಡೆಯುತ್ತಿದೆ, ಆದ್ದರಿಂದ ಏನಾದರೂ ಮಾಡಿ ಲೋಕಲ್ ಮರಳು ಲಾರಿಗಳನ್ನು ಮಾತ್ರ ಬಿಡಲಿ, ಹೊಳೆಯಿಂದ ತರುವ ಮರಳನ್ನು ಹಿಡಿದು ಬೇಕಾದರೆ ಬಲಿ ಹಾಕಿ, ನಾನು ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಹೇಳುವಂಥದ್ದು ಸರಿ ಇದೆ. ನಮ್ಮಲ್ಲೂ ಬ್ಲಾಕ್ಸ್ ಇಲ್ಲ, ಅಲ್ಲೂ ಕೂಡ ಹಿಡಿದು ಹಾಕಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನಮಗೆ ಸುತ್ತಾ 60 ಕಿ.ಮೀ.ನಲ್ಲಿ ಎಲ್ಲೂ ಇಲ್ಲ.

ಅಧ್ಯಕ್ಷರು: ಸಾಕು ಬಿಡಿ, ಮಾನ್ಯ ಮುಖ್ಯಮಂತ್ರಿಯವರು ಏನಾದರೂ ಇದ್ದರೆ ಹೇಳುತ್ತಾರೆ, ಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: KDP meetting ನಲ್ಲೂ ಹೇಳಿದ್ದಾರೆ, ಅಲ್ಲೆ direction ಕೊಟ್ಟಿದ್ದರು. ಆದರೆ ಡಿ.ಸಿ.ಯವರು ನಮಗೆ ಸರ್ಕಾರದಿಂದ ಓರಲ್ ಆಗಿ ಏನು ಮಾಹಿತಿ ಬಂದಿಲ್ಲವೆಂದು, ಪ್ರತಿ ದಿವಸ ನಾಲ್ಕು ಟ್ಯಾಕ್ಟರ್‌ಗಳನ್ನು ಹಿಡಿಯುತ್ತಾರೆ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ಚರ್ಚೆಗೆ ಅವಕಾಶವಿಲ್ಲ. ತಾವು ಚರ್ಚೆ ಮಾಡಬೇಕೆಂದರೆ ವಿಷಯವನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆಯಿತು, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಬರಲಿ.

ಅಧ್ಯಕ್ಷರು: ಉತ್ತರ ಕೊಟ್ಟಿದ್ದಾರಲ್ಲಾ...

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಇದು ಲೋಕಲ್ ಮರಳು, ಇದು ಸ್ಥಳೀಯ ಮರಳಾಗಿದೆ, ಕೆರೆ–ಕಟ್ಟೆಗಳಲ್ಲಿ ಸಿಗುವಂಥ ಮರಳು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅರಸೀಕೆರೆಯಲ್ಲಿ ಯಾವ ನದಿಗಳು ಇಲ್ಲ, ಅಲ್ಲಿ ಯಾವ ಬ್ಲಾಕ್‌ಗಳು ಕೂಡ ಇಲ್ಲ. ಅರಸೀಕೆರೆಯಲ್ಲಿ ನದಿ ಎಲ್ಲಿದೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಏನೂ ಇಲ್ಲ, ಮಣ್ಣೂ ಇಲ್ಲ.

ಶ್ರೀ ಸಿದ್ದರಾಮಯ್ಯ: ಅಲ್ಲಿಗೆ ಮರಳು ಕೊಡಬೇಕಾದರೆ ಆಲೂರು, ಬೇಲೂರು, ಅರಕಲಗೂಡು ಈ ಭಾಗಗಳಿಂದ ತಂದು ಕೊಡಬೇಕು. ಇವರು ಏನು ಹೇಳುತ್ತಿದ್ದಾರೆಂದರೆ, ಅಕ್ರಮವಾಗಿ ಲಾರಿಗಳಲ್ಲಿ ಮರಳು

ಹೊಡೆಯುವವರು, overload ಮಾಡಿಕೊಂಡು ಮರಳು ಹೊಡೆಯುವವರು, ಅವರ್ಯಾರನ್ನು ಮುಟ್ಟಲೇ ಬೇಡಿ ಎಂದರೆ ಹೇಗೆ ಆಗುತ್ತದೆ? ಮನೆಗಳಿಗೆಂದು ಎತ್ತಿನಗಾಡಿಯಲ್ಲಿ ಅಲ್ಲಿ-ಇಲ್ಲಿ ಮರಳು ಹೊಡೆದುಕೊಂಡರೆ ಅವರಿಗೆ exemption ಕೊಡಬಹುದು. ಇವರು ಟ್ರ್ಯಾಕ್ಟರ್‌ಗಳಲ್ಲಿ, ಲಾರಿಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಕೊಡುವುದಕ್ಕೆ how can we allow, it is not possible? ಮನೆಗಳಿಗೆ ಎತ್ತಿನ ಗಾಡಿಯಲ್ಲಿ ಹೊಡೆದುಕೊಂಡರೆ We can allow.

ಶ್ರೀ ಕೆ.ಎಂ. ಶಿವಲಿಂಗೇಗೌಡ: ತಾವು ನಮ್ಮ ಪ್ರಶ್ನೆಯನ್ನೇ ಅರ್ಥ ಮಾಡಿಕೊಳ್ಳುವುದಿಲ್ಲ. ನಾನು ದೇವರಾಣೆಗೂ ಅದನ್ನು ಕೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ನಿಮ್ಮ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿದ್ದೇನೆ.

ಅಧ್ಯಕ್ಷರು: ಸ್ವಲ್ಪ ತಾಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾನು ನದಿಯಿಂದ ತರುವಂಥದ್ದರ ಬಗ್ಗೆ ಕೇಳುತ್ತಿಲ್ಲ. ನಮ್ಮ ಹಳ್ಳ-ಕೊಳ್ಳದಲ್ಲಿ ಸಿಗುವ ಮರಳು ಬಗ್ಗೆ ಹೇಳಿ, ನಮಗೆ ನದಿ ಮರಳು ಬೇಡ, ಹಳ್ಳ-ಕೊಳ್ಳದಲ್ಲಿ ಸಿಗುವ ಲೋಕಲ್ ಮರಳು ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು: ಅವರು ಏನು ಹೇಳಿದರೂ ಬರೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಆಡಿದ ಮಾತುಗಳನ್ನು ದಾಖಲಿಸಕೊಳ್ಳಬಾರದೆಂದು ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ)

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಾವು senior member ಇದ್ದೀರಿ, ನಿಮಗೆ ಈ ವಿಷಯವಾಗಿ ಚರ್ಚೆ ಮಾಡಬೇಕೆಂದು ಇದ್ದರೆ ಬೇರೆ ರೂಪದಲ್ಲಿ ಚರ್ಚೆ ಮಾಡಿ, ಆಗ ವಿಷಯವನ್ನು ವಿಸ್ತಾರವಾಗಿ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಏನು ಚರ್ಚೆ ಮಾಡುವುದು?

ಶ್ರೀ ಸಿದ್ದರಾಮಯ್ಯ: ಮಾನ್ಯ ಶಿವಲಿಂಗೇಗೌಡರೆ ನಾನು ಹೇಳುವುದನ್ನು ಕೇಳಿ, ತಾವು ಕುಳಿತುಕೊಳ್ಳಿ, ನಾನು ಹೇಳಿದ್ದೇನೆ, ಅಕ್ರಮವಾಗಿ ಲೈಸನ್ಸ್ ಇಲ್ಲದೇ...

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಿ, ನಾವು ಎಲ್ಲಾ ದಾಖಲೆ ಸಮೇತ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಈಗ ಯಾರೋ ಮನೆಗೆ ಎತ್ತಿನಗಾಡಿಯಲ್ಲಿ ಹಳ್ಳದಲ್ಲಿರುವ ಮರಳು ಅಥವಾ ಇನ್ಯಾವುದೊ ಪಕ್ಕದಲ್ಲಿರುವಂಥ ಜಮೀನಿನಲ್ಲಿರುವಂಥ ಮರಳನ್ನು ತೆಗೆದು ಹೊಡೆದುಕೊಂಡರೆ ನಮ್ಮದು ಏನು ತಕರಾರು ಇಲ್ಲ. ಆದರೆ ಕದ್ದು ವ್ಯಾಪಾರ ಮಾಡುವುದಕ್ಕೆ ಲೈಸೆನ್ಸ್ ಇಲ್ಲದೇ ಲಾರಿಯಲ್ಲಿ ತೆಗೆದುಕೊಂಡು ಹೋಗುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರನ್ನು ಹಿಡಿದು ಬಲಿ ಹಾಕಿ, ನೀವು ಲೋಕಲ್ ಮರಳನ್ನು ಕೈ ಬಿಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅವರನ್ನೆ ಬಲಿ ಹಾಕುವುದು, ಎತ್ತಿನಗಾಡಿಯಲ್ಲಿ ಮನೆಗೆ ತೆಗೆದುಕೊಂಡು ಹೋಗುವವರಿಗೆ ತೊಂದರೆ ಕೊಡುವುದಿಲ್ಲ, ನಾವು strict instruction ಕೊಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಲೋಕಲ್ ಮರಳಿಗೆ ಅಷ್ಟೇ ಕೊಡಿ.

ಶ್ರೀ ಸಿದ್ದರಾಮಯ್ಯ: ಲೋಕಲ್ ಮರಳು ಅಂಥ ಒಂದು ಇದೆಯೇ?

ಅಧ್ಯಕ್ಷರು: Ok. ಮಾನ್ಯ ರೇವಣ್ಣನವರೆ, ಈಗಾಗಲೇ ಈ ವಿಷಯವಾಗಿ ಒಂದು ಸಮಿತಿ ಕೆಲಸ ಮಾಡುತ್ತಿದೆ, ಸಮಿತಿಯ report ಬಂದಮೇಲೆ ಚರ್ಚೆಗೆ ಅವಕಾಶವಿದೆ. ಒಂದು ವೇಳೆ ನಿಮಗೆ ಅವಶ್ಯಕತೆ ಇದ್ದರೆ, ಒಂದು ಚರ್ಚೆಗೆ ಹಾಕಿಕೊಳ್ಳಿ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಆಗ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಅರ್ಧ ಗಂಟೆಗೆ ಚರ್ಚೆಗೆ ಕೊಡಿ.

ಅಧ್ಯಕ್ಷರು: ಅದನ್ನೇ ಚರ್ಚೆ ಕಾಲದಲ್ಲಿ ಹೇಳಿ.

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ, ನನಗೆ ಸಮಾಜ ಕಲ್ಯಾಣ ಸಚಿವರಿಂದ ಮೊರಾರ್ಜಿ ದೇಸಾಯಿ ಸ್ಕೂಲ್‌ಗಳ ಬಗ್ಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಇಲ್ಲ, ಆಮೇಲೆ ಕೊಡುತ್ತಾರೆಂದು ಹೇಳಿದೆನಲ್ಲಾ.

ಶ್ರೀ ಅಶೋಕ ಮಹದೇವಪ್ಪ ಪಟ್ಟಣ್: ಮಾನ್ಯ ಅಧ್ಯಕ್ಷರೆ, ನಾಳೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ನಾಳೆ ಉತ್ತರ ಕೊಡುತ್ತಾರೆ. ಶ್ರೀಮತಿ ಶಕುಂತಲಾ ಟಿ. ಶೆಟ್ಟಿಯವರು ಇಲ್ಲ, ಅವರು ಹೇಳಿ ಹೋಗಿದ್ದಾರೆ. ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಇಲ್ಲ.

(ಮಾನ್ಯ ಸದಸ್ಯರುಗಳು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ, ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 36 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ

ದಿನಾಂಕ:16ನೇ ಜುಲೈ ಮಾಹೆ 2015ರ ಗುರುವಾರದಂದು

ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು